# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 2015 |
| ಸದಸ್ಯರ ಹೆಸರು: | ಶ್ರೀ ಬಸನಗೌಡ ಬಾದರ್ಲಿ |
| ಉತ್ತರಿಸಬೇಕಾದ ದಿನಾಂಕ: | 25.03.2026 |
| ಉತ್ತರಿಸಬೇಕಾದ ಸಚಿವರು: | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಿಂಧನೂರು ತಾಲ್ಲೂಕಿನ ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ದೇವಸ್ಥಾನಗಳ ಹೆಸರಿನಲ್ಲಿ ಎಷ್ಟು ಎಕರೆ ಜಮೀನು ಇದೆ: | ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕಿನ ಮುಜರಾಯಿ ಇಲಾಖೆಯ ಅಧೀನದಲ್ಲಿ ಬರುವ ದೇವಸ್ಥಾನಗಳ ಹೆಸರಿನಲ್ಲಿ ಒಟ್ಟು 40 ಎಕರೆ 26.5 ಗುಂಟೆ ಜಮೀನು ಇರುತ್ತದೆ. |
| ಆ) | ಇಲಾಖೆಯಿಂದ ಸದರಿ ದೇವಾಲಯಗಳ ಜಮೀನಿನ ಸಂರಕ್ಷಣೆಗೆ ಕ್ರಮವಹಿಸಲಾಗಿದೆಯೇ; | ದೇವಸ್ಥಾನಗಳಿಗೆ ಸೇರಿದ ಜಮೀನು ಮತ್ತು ಸ್ವತ್ತುಗಳನ್ನು ಸಂರಕ್ಷಣೆ ಮಾಡಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>1. ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ/ ದೇವಾಲಯಕ್ಕೆ ಸೇರಿದ /ಛತ್ರಗಳ ಜಮೀನು ಹಾಗೂ ಇತರ ಆಸ್ತಿಗಳ ಸಂರಕ್ಷಣೆಗಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅ.ಸ.ಪತ್ರ ಸಂ:ಮುಕಾ/ 1265/ 2020, ದಿನಾಂಕ: 11.12.2020 ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಿ ದೇವಾಲಯದ ಜಮೀನುಗಳನ್ನು ಆದ್ಯತೆ ಮೇರೆಗೆ ಅಳತೆ ಮಾಡಿ ನಕ್ಷೆ ತಯಾರಿಸಲು ಹಾಗೂ ಕನಿಷ್ಟ ತಿಂಗಳಿಗೆ ಒಂದು ತಾಲ್ಲೂಕಿನಲ್ಲಿ 5 ದೇವಾಲಯಗಳ ಆಸ್ತಿಯನ್ನು ಸರ್ವೆ ಮಾಡಿ ದಾಖಲೀಕರಣ ಗೊಳಿಸಿ ವರದಿಯನ್ನು ಸಲ್ಲಿಸಲು ಸಹಾಯಕ ದತ್ತಿ ಸಮೀಕ್ಷಾಧಿಕಾರಿ ಗಳಾಗಿರುವ ಭೂದಾಖಲೆಗಳ ಉಪ ನಿರ್ದೇಶಕರಿಗೆ ನಿರ್ದೇಶನವನ್ನು ನೀಡಲಾಗಿರುತ್ತದೆ.<br>2. ಸರ್ಕಾರದ ಪತ್ರ ಸಂಖ್ಯೆ:ಕಂಇ 49 ಮುಅಬಿ 2021.ದಿನಾಂಕ:11.11.2021ರಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚಿತವಾಗಿರುವ ಧಾರ್ಮಿಕ ಸಂಸ್ಥೆಗಳ/ದೇವಸ್ಥಾನಗಳ ಹೆಸರು, ಅವುಗಳಿಗೆ ಸೇರಿದ ಜಮೀನುಗಳು ಆರ್.ಟಿ.ಸಿಯಲ್ಲಿ ನಮೂದಾಗಿದೆಯೇ? ಅಥವಾ ಇಲ್ಲವೇ? ಎಂಬ ಬಗ್ಗೆ ಪರಿಶೀಲಿಸಿ ನಮೂದಾಗದೇ ಇದ್ದಲ್ಲಿ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ಆರ್.ಟಿ.ಸಿ.ಯಲ್ಲಿ "ದೇವಾಲಯದ ಹೆಸರು" – "ಧಾರ್ಮಿಕ ದತ್ತಿ ಇಲಾಖೆ" ಎಂದು ನಮೂದಿಸುವ ಕಾರ್ಯವನ್ನು ಕಂದಾಯ ತಹಸೀಲ್ದಾರ್ ಮತ್ತು ಕಂದಾಯ ಇಲಾಖೆಯ ಸಿಬ್ಬಂದಿಗಳು ಪೂರ್ಣಗೊಳಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಕಂದಾಯ ಇಲಾಖೆ ರವರು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಿರುತ್ತಾರೆ.<br>3. ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:WP/27/2018(LB-RES)ರ ದಿನಾಂಕ: 04.09.2023 ರ ತೀರ್ಪಿನಲ್ಲಿ ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿರುತ್ತದೆ.<br><br>"Learned Additional Government Advocate is also directed to bring the above observations to the notice of the Endowment Commissioner. Who shall inform all the concerned authorities to make necessary entries in the name of the deity whenever any property is transferred to such temple. Either by a government agency or by a private person. All the properties are necessarily to stand in the name of the deity and the managing committee or any other person managing the temple would no have any individual right title or interest in the said property"<br><br>4. ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 14.09.2023ರ ತೀರ್ಪಿನಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಪತ್ರ ಸಂಖ್ಯೆ:HRICE-LAW0LAW/91/2023 (1203396) ದಿನಾಂಕ:02.11.2023, ದಿನಾಂಕ:01.12.2023 ಹಾಗೂ HRICE-LND0ADM3/1/2026-E-2026334 ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ ಸೂಚನೆಯನ್ನು ನೀಡಲಾಗಿರುತ್ತದೆ.<br>5. ಅಧಿಸೂಚಿತ ದೇವಾಲಯಗಳ ಜಮೀನುಗಳ ಸಂರಕ್ಷಣೆಗಾಗಿ ಕೆಲವು ಕಡೆ ಬೇಲಿಗಳನ್ನು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | ನಿರ್ಮಿಸಲಾಗಿದೆ. ಎಲ್ಲಾ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ ನಿಖರ ಮಾಹಿತಿ ಗಾಗಿ ಜಿಯೋ ಫೆನ್ಸಿಂಗ್ ಮಾಡಿಸಲು ಪರಿಶೀಲಿಸಲಾಗುತ್ತಿದೆ.<br><br>ದೇವಾಲಯಕ್ಕೆ ಸೇರಿದ ಸ್ವತ್ತುಗಳನ್ನು ಕಾಯ್ದೆಯ ಕಲಂ 31(7)ರಡಿಯಲ್ಲಿ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕ್ರಮವಹಿಸಲಾಗುತ್ತಿದೆ.<br><br>ರಾಜ್ಯದ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿ ಸಂರಕ್ಷಣೆಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>1. ಈವರೆವಿಗೆ ರಾಜ್ಯದಲ್ಲಿ 19,020 ಅಧಿಸೂಚಿತ ಮುಜರಾಯಿ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಳತೆಯಾಗಿರುತ್ತದೆ.<br>2. ಒಟ್ಟು 20,730 ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳನ್ನು ಖಾತೆ ಮಾಡಿಸಲು ಕ್ರಮವಹಿಸಲಾಗಿದೆ.<br>3. ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಆಸ್ತಿಗಳ ಅಕ್ರಮ ಪರಭಾರೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ದೇವಾಲಯಗಳ ಸ್ವತ್ತುಗಳ ಪಹಣಿಗಳನ್ನು ಹಾಗೂ ಖಾತೆಗ ಳನ್ನು Flag ಮಾಡಿಸಲು ಕ್ರಮವಹಿಸಲಾಗಿದೆ.<br>4. ಈವರೆವಿಗೆ ಅಧಿಸೂಚಿತ ದೇವಸ್ಥಾನಗಳ ಒಟ್ಟು 309-32 ಎಕರೆ-ಗುಂಟೆ ಜಮೀನಿನ ಒತ್ತುವರಿ ಯನ್ನು ತೆರವುಗೊಳಿಸಲಾಗಿದೆ.<br>5. ಅಧಿಸೂಚಿತ ದೇವಾಲಯಗಳ ಜಮೀನುಗಳ ಸಂರಕ್ಷಣೆಗಾಗಿ ಕೆಲವು ಕಡೆ ಬೇಲಿಗಳನ್ನು ನಿರ್ಮಿಸಲಾಗಿದೆ. ಎಲ್ಲಾ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ ನಿಖರ ಮಾಹಿತಿಗಾಗಿ ಜಿಯೋ ಫೆನ್ಸಿಂಗ್ ಮಾಡಿಸಲು ಪರಿಶೀಲಿಸಲಾಗುತ್ತಿದೆ.<br>6. ಒಟ್ಟು 1800 ಅಧಿಸೂಚಿತ ದೇವಾಲಯ ಮತ್ತು ದೇವಾಲಯಕ್ಕೆ ಸೇರಿದ ಸ್ವತ್ತುಗಳನ್ನು ಕಾಯ್ದೆಯ ಕಲಂ 31(7)ರಡಿಯಲ್ಲಿ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | 2023ನೇ ಸಾಲಿನ ನಂತರ ಇಲಾಖೆಗೆ ಸೇರಿದ ದೇವಾಲಯಗಳ ಸ್ಥಿರಾಸ್ತಿಗಳ ಸರ್ವೆ ಕಾರ್ಯ/ ದಾಖಲೀಕರಣ/ಒತ್ತುವರಿ ತೆರವು ಜಮೀನುಗಳ ಸಂರಕ್ಷಣೆಯನ್ನು ಪ್ರಮುಖ ಆಧ್ಯತೆಯಾಗಿ ಪರಿಗಣಿಸಿಕೊಂಡು ಅದನ್ನು ಕಾರ್ಯ ರೂಪಕ್ಕೆ ತರುವ ನಿಟ್ಟಿನಲ್ಲಿ ಸರ್ಕಾರವು ಆದೇಶ ಸಂಖ್ಯೆ ಕಂಇ 27 ಮುಆಬಿ 2025 ದಿನಾಂಕ: 12-02-2026 ರನ್ವಯ ಭೂ-ವರಾಹ ಯೋಜನೆ ಯನ್ನು ಜಾರಿಗೊಳಿಸಲು ಸಚಿವ ಸಂಪುಟದ ಅನುಮೋದನೆಯನ್ನು ಪಡೆದು, ಈ ಯೋಜನೆಗೆ 2025-26ನೇ ಸಾಲಿನಲ್ಲಿ ಒಟ್ಟು ರೂ.1500.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಿರುತ್ತದೆ. |
| ಇ) | ಪ್ರಸ್ತುತ ಸಿಂಧನೂರು ತಾಲ್ಲೂಕಿನ ದೇವಾಲಯಗಳಿಗೆ ಸೇರಿದ ಎಷ್ಟು ಪ್ರಮಾಣ ಜಮೀನು ಖಾಸಗಿ ವ್ಯಕ್ತಿಗಳಿಂದ ಒತ್ತುವರಿಯಾಗಿದೆ; | ಸಿಂಧನೂರು ತಾಲ್ಲೂಕಿನಲ್ಲಿ ಸೋಮಲಾಪುರ ಗ್ರಾಮದ ಶ್ರೀ ಅಂಭಾದೇವಿ ದೇವಸ್ಥಾನಕ್ಕೆ ಸಂಬಂಧಿಸಿದ ಜಮೀನಿನಲ್ಲಿ 30 ಗುಂಟೆ ಜಮೀನು ಒತ್ತುವರಿಯಾಗಿದ್ದು, ಒತ್ತುವರಿ ಜಮೀನಿನಲ್ಲಿ ಜನತಾ ಮನೆಗಳು ನಿರ್ಮಾಣ ವಾಗಿರುತ್ತದೆ. ಸದರಿ ಒತ್ತುವರಿಯನ್ನು ತೆರವುಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮವಹಿಸ ಲಾಗುವುದೆಂದು ಜಿಲ್ಲಾಧಿಕಾರಿಯವರು ವರದಿ ಸಲ್ಲಿಸಿರುತ್ತಾರೆ. |
| ಈ) | ಈ ಸಂಬಂಧ ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ. | |

ಸಂಖ್ಯೆ:ಕಂಇ 95 ಮುಸಪ್ರ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು